(5.) ಚಿಲ್ಲರೆ ಜವುಬೀನೆಗಳಿಗೆ ಅಂದರೆ ಸಂಣ ಚದರ ನಾಟುಗಳಿಗೆ ದರ ಅಡಿ 1ಕ್ಕೆ ಯಿಪ್ಪೈಂತಲು, ಉಂಡೆ ಮರಗಳು ಅಂದರೆ ಡಿಪೋಗಳಲ್ಲಿ ಸಾಧಾರಣವಾಗಿ ಬೆಕರಿ ಮಾಡಲ್ಪಡುವ ಗಾಡಿ 1ಕ್ಕೆ 20 ಸರಗಳಂತೆ ದರ ಗಾಡಿ ಬೋಜಾ 1ಕ್ಕೆ ಮತ್ತು ಗಾಡಿ 1ಕ್ಕೆ 16 ಮೂಡಿಗೆ ಯಂತೆ ದರ ಗಾಡಿ ಬೋಜಾ 1ಕ್ಕೆ ಯಿಪ್ಪೈಂದು ನಮೂದಿಸತಕ್ಕದ್ದು. ಬೊಂಬುಗಳಿಗೆ ದರ ಗಾಡಿ ಬೋಜಾ 1ಕ್ಕೆ ಅಂಡೆ ಬಿದರು 15ರಂತೆಯು ಹೆಬ್ಬಿದರು 25ರಂತೆಯು ಮೇದರಗಳು 150ರಂತೆಯೂ ಕಿರಿಬಿದರು 200ರ ರಂತೆಯು ಚಾಮರಾಜ ನಗರದಲ್ಲಿ 300ರ ರಂತೆಯು ತಯಾರಿಯಿಂದ ಹೇರತಕ್ಕದ್ದು.

(6.) ಮೈಸೂರು ಉಡ್ಯೈರ್ಡಿಗೆ ಅಲ್ಲದೆ ಇತರ ಡಿಪೋಗಳಿಗೆ ರವಾನೆ ಬಗ್ಯೆ ತಯಾರ್ಮಾಡುವ ಚಿಲ್ಲರೆ ಜವುಬೀನೆ ಮತ್ತಾಗಳು ಸಹ ತಯಾರಿ ತಾರೀಖು ಲಾಗಾಯತು 20 ದಿವಸಗಳ ವಳಗೆ ಆಯಾ ಡಿಪೋಗಳಿಗೆ ರವಾನಿಸತಕ್ಕದ್ದು. ಮೈಸೂರಿಗೆ ಸಾಗಿಸುವ ಬಗ್ಯೆ 1 ತಿಂಗಳು ಪುರಸತ್ತು ಕೊಡಲ್ಪಡುತ್ತೆ. ಹಾಗೆ ತಪ್ಪಿದಲ್ಲಿ ತಯಾರಿ ಮತ್ತು ಕಿರಾಯದ ಹಕ್ಕನ್ನು ಕಳದುಕೊಳ್ಳತಕ್ಕದ್ದು.

(7.) ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ ಮಾಡಲ್ಪಟ್ಟ ತರುವಾಯ ತನ್ನ ದರಖಾಸ್ತು ಮಂಜೂರಾದ ಬಗ್ಯೆ ತಾನು ಬರದುಕೊಡುವ ಕರಾರು ಮೇರೆ ಕ್ರಮವಾಗಿ ನಡದುಕೊಳ್ಳುವ ಬಗ್ಯೆ ಜಾಮೀನಿ ತರೀಕೆ ಫಾರೆಸ್ಟು 1ಕ್ಕೆ 25 ರೂಪಾಯಿ ಪ್ರಕಾರ ಡಿಪಾಜಿಟ್ ಕಟ್ಟತಕ್ಕದ್ದು.

(8.) ಫಾರೆಸ್ಟುಗಳ ಅಸಿಸ್ಟೆಂಟ್ ಕ್ಯಸರ್‌ವೇಟರವರು ಕಮ್ಮಿ ದರದ ಅಥವಾ ಮತ್ಯಾವ ದರಖಾಸ್ತುಗಳನ್ನಾಗಲಿ ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ.

(9.) ಉದ್ದೇಶಿಸುವ ಕಂಟ್ರಾಕ್ಟುದಾರರಿಗೆ ಅಪೇಕ್ಷಿತವಾದ ಇನ್ನು ಜಾಸ್ತಿ ಸಂಗತಿಗಳನ್ನು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಅಸಿಸ್ಟೆಂಟ್ ಕ್ಯಸರ್‌ವೇಟರವರ ಆಫಿಸಿನಲ್ಲಿ ವಿಚಾರಿಸಿ ತಿಳಿಯಬಹುದು.

ತಾರೀಖು 30ನೇ ಏಪ್ರಿಲ್ 1890.

ಈ ಕೆಳಗೆ ನಮೂದಾಗುವ ಆನೆಗಳು ಮತ್ತು ಹರಾಜ್ ತಾರೀಖು ವರಿಗೆ ಹಿಡಿಯಲ್ಪಡುವ ಆನೆಗಳು ಸಹ 1890ನೇ ಇಸವಿ ಜೂ೯ ತಾರೀಖು 16ರಲ್ಲು ಮೈಸೂರಿನಿಂದ 20 ಮೈಲಿ ಫಾಸಲೆಯಲ್ಲಿ ಯಿರುವ ಹೆಗ್ಗಡದೇವನಕೋಟೆ ತಾಲ್ಲೂಕು ಹಂಪಾಪುರದ ಮೊಕ್ಕಾಂನಲ್ಲಿ ಫಾರೆಸ್ಟ್ ಅಸಿಸ್ಟೆಂಟ್ ಕ್ಯಸರ್‌ವೇಟರವರಿಂದ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

ನಂ.	ಹೆಸರು.	ಜಾತಿ.	ಉತ್ತರ ಅಡಿ	ಉತ್ತರ ಅಂಗುಲ	ಹಿಡಿದ ತಾರೀಖು
1	ನರಸುಹ್ಮ ..	ಗಂಡು	6	6	21—2—90
2	ಚಂದ್ರಶೇಖರ ..	ಡಿಟೋ	4	9	14—3—90
3	ಪರಲಕ್ಷ್ಮಿ ..	ಹೆಣ್ಣು	6	0	ಡಿಟೋ
4	ಗಜಲಕ್ಷ್ಮಿ ..	ಡಿಟೋ		6	ಡಿಟೋ

ಷರತ್ತುಗಳು—ಸರ್ಕಾರದ ಹರಾಜ್ ಖೈದಾದ ಕೂಡ್ಲೆ ಚಡ ದರಖಾಸ್ತುದಾರನು ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿ ಶೇವಣಿಯನ್ನ ಪಾವತಿ ಮಾಡತಕ್ಕದ್ದು, ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳ ವಳಗಾಗಿ ಪಾವತಿಯಿಂದ ಆನೆಯನ್ನು ತೆಗದುಕೊಂಡು ಹೋಗತಕ್ಕದ್ದು, ಇವಕ್ಕೆ ತಪ್ಪುದಲ್ಲಿ ಶೇವಣಿ ಮೊಬಲಗು ಸರಕಾರಕ್ಕೆ ದಾಖಲ್ಮಾಡಿಕೊಳ್ಳಲಾಗುತ್ತೆ, ಮತ್ತು ಸದರೀ ಆನೆಗಳು ಪುನಹ ಹರಾಜು ಮಾಡುವದರಲ್ಲಿ ವುಂಟಾಗಬಹುದಾದ ನುಕ್ಸಾನಿಗೆ ಮೊದಲ್ ದರಖಾಸ್ತುದಾರನ್ನ ಗುರಿಮಾಡಲಾಗುತ್ತೆ, ನಫೆ ಬಂದಲ್ಲಿ ದರಖಾಸ್ತುದಾರನಿಗೆ ಕೊಡಲಾಗುವದಿಲ್ಲ. ದರಖಾಸ್ತುದಾರರು ಅವರು ಪಡಕೊಂಡ ಆನೆಗಳಿಗೆ ಹರಾಜ್ ತಾರೀಖು ಲಾಗಾಯತು ತಗಲುವ ಖರ್ಚು ವಹಿಸಬೇಕು.

ಬಿ. ರಾಮಸ್ವಾಮಯ್ಯರ್,
ಅಫಿಷಿಯೇಟಿಂಗ್ ಅಸಿಸ್ಟೆಂಟ್ ಕ್ಯಸರ್‌ವೇಟರ್.

ಪ್ರಸಿದ್ಧ ಪತ್ರಿಕೆ.

ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ಮಹಾಸ್ವಾಮಿಯವರ ಆಜ್ಞಾನುಸಾರ, ಆಳಿದ ಮಹಾಸ್ವಾಮಿಯವರಾದ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರವರಿಂದ ಕರ್ಣಾಟಕ ಭಾಷೆಯಲ್ಲಿ ವಾಕ್ಯರೂಪವಾಗಿ ವಿರಚಿತವಾದ ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಶ್ರೀಮನ್ಮಹಾಭಾರತದ ಕನ್ನಡದ ಟೀಕನ್ನು ಲೋಕೋಪಕಾರಾರ್ಥವಾಗಿರುವಂತೆ, 1884–85ನೇ ಇಸವಿಯಲ್ಲಿ ಮೈಸೂರು ಅರಮನೆಯ ಜಗನ್ಮೋಹನ ಮುದ್ರಾಕ್ಷರ ಶಾಲೆಯಲ್ಲಿ ವಿರಾಟಪರ್ವವನ್ನೂ ಉದ್ಯೋಗಪರ್ವವನ್ನೂ ಮುದ್ರಿಸಿ ಪ್ರಚಾರಪಡಿಸಿರುವ ವಿಷಯವು ಸರ್ವರಿಗೂ ವಿದಿತವಾಗಿರುವದಪ್ಪೆ.

ಶ್ರೀಮನ್ಮಹಾರಾಜರವರ ಆಜ್ಞೆಯಂ ಪಡೆದು ಉಳಿದಿದ್ದ ಹದಿನಾರು ಪರ್ವಗಳಲ್ಲಿ ಆದಿಪರ್ವವೂ ಸಭಾಪರ್ವವೂ ಬೆಂಗಳೂರಲ್ಲಿರುವ ಚಾಮುಂಡೇಶ್ವರಿ ಮುದ್ರಾಶಾಲೆಯಲ್ಲಿ ಮುದ್ರಿಸಲ್ಪಟ್ಟು ಈಗ ಕ್ರಯಕ್ಕೆ ಸಿದ್ಧವಾಗಿರುತ್ತದೆ.

ಈಗ ನಮ್ಮಲ್ಲಿ ಕರ್ಣಪರ್ವವು ಮುದ್ರಿಸಲ್ಪಟ್ಟು ಕ್ರಯಕ್ಕೆ ಸಿದ್ಧವಾಗಿರುತ್ತದೆ. ಇದರ ಕ್ರಯವು ಪ್ರತಿ ಬಂದಕ್ಕೆ ರೂಪಾಯಿ 1—12—0, ಟಪಾಲ್ ಹಾಸಲ್ ಸಹಿತ ರೂಪಾಯಿ 2—0—0, ಬೇಕಾದವರು ಈ ಕೆಳಗೆ ರುಜು ಮಾಡಿರುವವರಿಗೆ ಕ್ರಯವನ್ನು ಕಳುಹಿಸಿ ಬರೆದರೆ ಪುಸ್ತಕವು ದೊರಿಯುತ್ತದೆ. ಈಗ ಅರಣ್ಯಪರ್ವವು ಮುದ್ರಣೆಯಲ್ಲಿರುತ್ತದೆ.

ಬಿ. ಚ. ರಾಜಪ್ಪ,
ಮೈಸೂರಲ್ಲಿರುವ ಸರಕಾರದ ಬ್ರಾಂಚ್ ಮುದ್ರಾಶಾಲೆಯ ಸೂಪರ್‌ವೈಜರ್.

ಮೈಸೂರು,
16ನೇ ಏಪ್ರಿಲ್ 1890.

ಹಾಸನ ಡಿಸ್ಟ್ರಿಕ್ಟ್

1890ನೇ ಇಸವಿ 2ನೇ ಜೂ೯.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟ್ ಅರಸೀಕೆರೆ ತಾಲ್ಲೂಕಿನಲ್ಲಿ ಕುರಂಗದ ಕಲ್ಲುಗಳನ್ನ ಜಮಾ ಯಿಸಿಕೊಳ್ಳತಕ್ಕ ಹಕ್ಕುದಾರಿಯು ಸದರೀ ಅರಸೀಕೆರೆ ತಾಲ್ಲೂಕು ಕಜೇರಿಯಲ್ಲಿ ಸ೯ 1890ನೇ ಇಸವಿ ಜುಲೈ ತಾರೀಖು 2ನೇ ದಿವಿ 11 ಘಂಟೆಗೆ ಪ್ರಾರಂಭಿಸಿ ಬಹಿರಂಗವಾಗಿ ಹರಾಜ್ ಮಾಡಲ್ಪಡುವದು.

2. ಆಮಲ್‌ದಾರ್ರು ಅಥವಾ ಶಿರಸ್ತೇದಾರ್ರು ಹರಾಜ್ ಮಾಡಿಸುವರು.

3. ಈ ಹರಾಜಿನ ಚಡದರಖಾಸ್ತು ಹಾಸ೯ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರಿಂದ ಹರಾಜ್ ಮಂಜೂರ್ಮಾಡಲ್ಪಡುವ ಪರಿಯಂತರ ಕಾಯಮ್ಮಾದ್ದಾಗಿ ತಿಳಿದುಕೊಳ್ಳಕೂಡದು.

4. ಈ ಇಜಾರೆಯು ಸ೯ 1891ನೇ ಇಸವಿ ಮಾರ್ಚಿ 31ರ ವರಿಗೆ ಜಾರಿಯಲ್ಲಿ ಇರತಕ್ಕದ್ದು.

5. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗುಪೈಕಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಡಿಪಾಜಿಟ್ ಇಡಬೇಕಲ್ಲದೆ ಹರಾಜ್ ಮಂಜೂರ್ಮಾಡಲ್ಪಟ್ಟ ಸಂಗತಿ ಡೆಪ್ಯೂಟಿ ಕಮ್ಮಿಷನರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 7 ದಿವಸದ ವಳಗಾಗಿ ಕ್ರಯದ ಪಟ್ಟು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಬಂದಾಣೆಯಂತೆ ಆಗುವ ಲೋಕಲ್‌ಸೆಸ್ ದೇಖೀಲ ಎಬಾಹಿಪಾಯುಪ್ಪೆ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಂಗೆ ಡಿಪಾಜಿಟ್ ಇಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುಯು ಅವ್ವಲ್ ಕ್ರಯದಾರನ ಖರ್ಚಿಗೂ ಮತ್ತು ನುಕ್ಸಾನಿಗೂ ವಳಪಟ್ಟು ಪುರಹ ಏಕ್ರಯ ಮಾಡಲ್ಪಡುವದು.

6. ಹರಾಜ್ ಷರತ್ತುಗಳು—

(a) ಹಿಡುವಳಿ ಜಮಿನಿನಲ್ಲಿ ಇರತಕ್ಕ ಕಲ್ಲುಗಳನ್ನು ತೆಗದುಕೊಳ್ಳಬೇಕಾದರೆ ಹಿಡುವಳಿದಾರನ ಸಮ್ಮತಿಯನ್ನ ಪಡಿಯಬೇಕು. ಜಮಿನ್ ಹಿಡುವಳಿದಾರನು ತನ್ನ ಕಲ್ಲುಗಳನ್ನು ಸ್ವಂತ ಪ್ರಯೋಜನಕ್ಕಾಗಿ ತೆಗದುಕೊಳ್ಳಲೂ ಕೂಡದು. ಇಜಾರೇದಾರನಿಗೆ ಮಾರಬೇಕೇ ಹೊರ್ತು ಇತರ ಜನಗಳಿಗೆ ಮಾರಲೂಕೂಡದು.

(b) ಇಜಾರ್‌ದಾರನು ಹುಲ್ಲುಬನ್ನಿ ಇಜಾರ್‌ದಾರರ ಚರಾವು ಹಕ್ಕಿನಲ್ಲಿ ಪ್ರವೇಶಿಸಕೂಡದು.

(c) ಬಂಜರು ಜಮಿನುಗಳು ಸಾಗುವಳಿ ಬಗ್ಗೆ ದರಖಾಸ್ತು ಬಂದಲ್ಲಿ ಆ ಪ್ರಕಾರ ಸಾಗುವಳಿಗೆ ಕೊಟ್ಟುಬಿಡುವದಕ್ಕೆ ಕುರಂಗದ ಇಜಾರೆದಾರನು ಅಡ್ಡಿ ಹೇಳಕೂಡದು. ಅಂತಾ ಜಮಿನುಗಳಲ್ಲಿ ಕುರಂಗದ ಕಲ್ಲುಗಳನ್ನು ತೆಗದುಕೊಳ್ಳತಕ್ಕ ಹಕ್ಕು ಮಾತ್ರ ಇಜಾರೆದಾರನಿಗೆ ವುಂದು ಇರುತ್ತೆ.

(d) ಇಜಾರೇದಾರನು ಕಲ್ಲುಗಳಿಗೋಸ್ಕರ ಜಮಿನುಗಳನ್ನ ಅಗಿಯಕೂಡದು. ಬಂಯ ವೇಳೆ ಹಾಗೆ ಅಗದಲ್ಲಿ ಆ ಗುಂಡಿಗಳನ್ನು ತಕ್ಷಣ ಮುಚ್ಚಿಬಿಟ್ಟು ಸಾಗುವಳಿಗೆ ಜಮಿನು ಲಾಯಖು ಇರುವ ಹಾಗೆ ಮಾಡಬೇಕು.

---

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹಾಸನ ಡಿಸ್ಟ್ರಿಕ್ಟ್ ಮಂಜರಾಬಾದ್ ಮತ್ತು ಹಾಸನ ತಾಲ್ಲೂಕುಗಳ ಈ ಕೆಳಗೆ ನಮೂದಾಗಲ್ಪಡುವ ಜಮಿನ್ ಕಾಫೀ ಸಾಗುವಳಿಗೋಸ್ಕರ ಇದರ ಕೆಳಗಿನ ಸ್ಪೈಟ್‌ಮೆಂಟಿನ ಷರಾ ಕಾಲಂನಲ್ಲಿ ನಮೂದಾಗುವ ತಾರೀಖು ಮತ್ತು ಸ್ಥಳದಲ್ಲಿ ಹಾಸನ ಡಿಸ್ಟ್ರಿಕ್ಟ್ ಜನರಲ್ ಆಸಿಸ್ಟೆಂಟ್ ಕಮ್ಮಿಷನರವರ ರೂಬರೂಬ್ ಹಾಸನ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷ೯ ಸಾಹೆಬರವರ ಮಂಜೂರಾತಿಗೆ ವೊಳಪಟ್ಟು ಹರಾಜು ಮಾಡಿಸಲ್ಪಡುವದು.

2. ಈ ಹರಾಜು ಬಹಿರಂಗವಾಗಿ ದಸ್ತೂರ್ ಷರತ್ತು ಅನುಸರಿಸಿ ಗೊತ್ತಾಗಲ್ಪಟ್ಟು ಎಕರೆಗೆ 10 ರೂಪಾಯಿಗಳ ಮೇಲೆ ಚಡದರಖಾಸ್ತು ಮಾಡುವವರ ಹೆಸರಿಗೆ ಖೈದ್ ಮಾಡಲ್ಪಡುವದು, ದರಖಾಸ್ತುದಾರನಿಂದ ಹಾಜರ್ಮಾಡಲ್ಪಟ್ಟು ಗೊತ್ತಾಗಲ್ಪಟ್ಟ ಖರೀದಿಯ ನಾಲ್ಕರಲ್ಲಿ ಬಂದುಭಾಗ ಡಿಪಾಜಿಟ್ ಹಣವು ದರಖಾಸ್ತುದಾರನ ಹೆಸರಿಗೆ ಹರಾಜು ನಿಂತಪಕ್ಷ ಅವನು ಈ ನೋಟೀಸ್ 4ನೇ ಕ್ಲಾಜ್ ವೇರಿಗೆ ಕೊಡಬೇಕಾದ ಕೇಕಡಾ 25 ರೂಪಾಯಿ ಹರಾಜು ಹಣದ ಡಿಪಾಜಿಟ್ಟಿಗೆ ವಜಾ ಮಾಡಲ್ಪಡುವದು, ಮತ್ತು ಇತರರು ಚಡ ದರಖಾಸ್ತು ಮಾಡಿ ಅವರಿಗೇನೇ ನಿಂತಪಕ್ಷ ದರಖಾಸ್ತುದಾರನ ತೇವಣಿಯು ವಾಪಸ್ ಮಾಡಲ್ಪಡುವದು